

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬದ್ರ್ ಯುದ್ಧಾನಂತರದ ಘಟನೆಗಳು

# ಹಮಾಸ್ – ಇಸ್ರೇಲ್ ಸಂಘರ್ಷ: ಮಾರ್ಗದರ್ಶನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **20–10–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಸಹ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಬದ್ರ್ ಯುದ್ಧದ ತಕ್ಷಣದ ನಂತರ ಸಂಭವಿಸಿದ ಕೆಲವು ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತೇನೆ.

ಹಝ್ರತ್ ಪೈಗಂಬರ್(ಸ)ರ ಜಾಮಾತ ಹಝ್ರತ್ ಅಬುಲ್‌ಆಸ್(ರ)ರ ಇಸ್ಲಾಂ ಸ್ವೀಕಾರದ ಘಟನೆ ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಜಮಾದಿಯುಲ್ ಊಲ ಹಿಜರೀ 6ರಲ್ಲಿ ಝೈದ್ ಬಿನ್ ಹಾರಿಸ್(ರ)ರ ನೇತೃತ್ವದಲ್ಲಿ ಎಪ್ಪತ್ತು ಸಹಾಬಿಯರ ಜೊತೆಗೆ ಒಂದು ಸೈನ್ಯವನ್ನು ಅಮೀಸ್ ಎಂಬ ಪ್ರದೇಶಕ್ಕೆ ಕಳುಹಿಸಿದರು. ಅಮೀಸ್ ಪ್ರದೇಶವು ಮದೀನದಿಂದ ನಾಲ್ಕು ದಿನಗಳ ಯಾತ್ರೆಯ ದೂರದಲ್ಲಿದೆ. ಒಂದು ದಿನದ ಯಾತ್ರೆ ಎಂದರೆ 12 ಮೈಲು ಆಗಿರುತ್ತದೆ ಎಂದು ಚರಿತ್ರೆಗಾರರು ಹೇಳುತ್ತಾರೆ. ಈ ರೀತಿಯಾಗಿ ಈ ಪ್ರದೇಶ ಮದೀನದಿಂದ 48 ಮೈಲುಗಳ ದೂರದಲ್ಲಿತ್ತು. ಈ ಕಾರ್ಯಾಚರಣೆಯ ಸ್ವಲ್ಪ ವಿವರಣೆ ಹೀಗಿದೆ: ಸಿರಿಯಾದ ಕಡೆಯಿಂದ ಮಕ್ಕಾದ ಖುರೈಶಿಗಳ ಒಂದು ಸಂಘ ಬರುತ್ತಿದೆ ಎಂದೂ ಆ ವ್ಯಾಪಾರಿ ಸಂಘದ ಉದ್ದೇಶ ಮುಸ್ಲಿಮರ ಮೇಲೆ ದಾಳಿ ಮತ್ತು ಯುದ್ಧ ನಡೆಸುವುದಾಗಿದೆ ಎಂದೂ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಅಂತೂ ಅವರು ಅದನ್ನು ತಡೆದರು ಮತ್ತು ಅವರ ಸಾಧನ ಸಾಮಗ್ರಿಗಳನ್ನು ವಶಪಡಿಸಿಕೊಂಡರು. ಕೆಲವು ಕೈದಿಗಳನ್ನು ಕೂಡ ಹಿಡಿಗೂಡಿದರು. ಅವರಲ್ಲಿ ಅಬುಲ್‌ಆಸ್(ರ) ಕೂಡ ಇದ್ದರು.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಅಮೀಸ್ ಯುದ್ಧದ ಕೈದಿಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಅಳಿಯನಾದ ಅಬುಲ್‌ಆಸ್(ರ) ಕೂಡ ಇದ್ದರು. ಅವರು ಹಝ್ರತ್ ಖದೀಜ(ರ)ರ ನಿಕಟ ಸಂಬಂಧಿಯಾಗಿದ್ದರು. ಆಗಲೂ ಅವರು ಮುಶ್ರಿಕ್ ಆಗಿದ್ದರು. ಅಬುಲ್ ಆಸ್ ತಾನು ಕೈದಿಯಾಗಿರುವುದನ್ನು ಹೇಗೋ ತನ್ನ ಪತ್ನಿ ಹಝ್ರತ್ ಝೈನಬ್(ರ)ರಿಗೆ ತಿಳಿಸಿದರು. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ಫಜ್ರ್ ನಮಾಝ್ ನಿರ್ವಹಿಸುತ್ತಿದ್ದಾಗ ಹಝ್ರತ್ ಝೈನಬ್(ರ) ಉಚ್ಚ ಸ್ವರದಲ್ಲಿ ಹೀಗೆ ಹೇಳಿದರು: ಎಲೈ ಮುಸ್ಲಿಮರೇ, ನಾನು ಅಬುಲ್ ಆಸ್‌ರಿಗೆ ಅಭಯವನ್ನು ನೀಡಿದ್ದೇನೆ. ನಮಾಝ್ ಮುಗಿಸಿದ ನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಝೈನಬ್ ಹೇಳಿದ್ದನ್ನು ನೀವು ಕೇಳಿರಬಹುದು. ಅಲ್ಲಾಹನಾಣೆ, ನನಗೆ ಇದರ ಬಗ್ಗೆ ಗೊತ್ತಿರಲಿಲ್ಲ. ಸತ್ಯವಿಶ್ವಾಸಿಗಳ ಜಮಾಅತಿನಲ್ಲಿ ಯಾರಾದರೂ ಯಾವನಾದರೂ ಸತ್ಯನಿಷೇಧಿಗೆ ಅಭಯ ನೀಡಿದರೆ, ಆ ಅಭಯವನ್ನು ಗೌರವಿಸಬೇಕು. ಅನಂತರ ಹಝ್ರತ್ ಪೈಗಂಬರ್(ಸ) ಝೈನಬ್(ರ)ರೊಡನೆ ಹೇಳಿದರು: ಯಾರಿಗೆ ನೀನು ಅಭಯ ನೀಡಿದ್ದೀಯೋ ಅವರಿಗೆ ನಾವು ಸಹ ಅಭಯ ನೀಡುತ್ತೇವೆ. ಅನಂತರ ಅಬುಲ್‌ಆಸಿನ ಸಂಪತ್ತನ್ನು ಮರಳಿಸಲಾಯಿತು ಮತ್ತು ಅಬುಲ್‌ಆಸಿನ ಪರವಾಗಿ ಸತ್ಕಾರವನ್ನು ಮಾಡಲು ಝೈನಬ್‌ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಏಕಾಂತದಲ್ಲಿ ಅವರನ್ನು ಭೇಟಿಯಾಗಬಾರದು ಎಂದೂ ಹೇಳಿದರು. ಕೆಲವು ದಿನಗಳ ನಂತರ ಅಬುಲ್‌ಆಸ್ ಮಕ್ಕಾಗೆ ಮರಳಿ ಹೋಗಿ ತನ್ನ ವ್ಯಾಪಾರ ವ್ಯವಹಾರಗಳನ್ನು ಮುಗಿಸಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಮುಸ್ಲಿಮರಾದರು. ಪುನಃ ನಿಕಾಹ್ ಇಲ್ಲದೇ ಹಝ್ರತ್ ಝೈನಬ್(ರ)ರನ್ನು ಹಝ್ರತ್ ಪೈಗಂಬರ್(ಸ) ಅಬುಲ್‌ಆಸ್‌ರಿಗೆ ಮರಳಿಸಿದರು.

ತನ್ನ ಪತಿ ಸತ್ಯನಿಷೇಧಿಯಾಗಿರುವ ಕಾರಣದಿಂದ ಮಹಿಳೆಯೊಬ್ಬಳು ಪತಿಯಿಂದ ಬೇರ್ಪಟ್ಟ ನಂತರ ಪತಿ ಇಸ್ಲಾಂ ಸ್ವೀಕಾರ ಮಾಡಿದರೆ ಪುನಃ ನಿಕಾಹ್ ನಡೆಸಬೇಕಾದ ಅಗತ್ಯವಿಲ್ಲ ಎಂಬ ಫತ್ವಾ ಈ ಘಟನೆಯಿಂದ ತಿಳಿದುಬರುತ್ತದೆ.

ತನ್ನ ಪತಿ ಇಸ್ಲಾಂ ಸ್ವೀಕಾರ ಮಾಡಿದ ನಂತರ ಹಝ್ರತ್ ಝೈನಬ್(ರ) ಹೆಚ್ಚು ಕಾಲ ಬದುಕಿರಲಿಲ್ಲ. ಹಿಜರೀ 8ರಲ್ಲಿ ಅವರು ನಿಧನರಾದರು. ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಹಝ್ರತ್ ಉಮ್ಮು ಐಮನ್(ರ), ಹಝ್ರತ್ ಸೌದ(ರ), ಹಝ್ರತ್ ಉಮ್ಮು ಸಲ್ಮಾ(ರ) ಮತ್ತು ಹಝ್ರತ್ ಉಮ್ಮು ಅತಿಯ(ರ) ಹಝ್ರತ್ ಝೈನಬ್(ರ)ರ ಸ್ನಾನವನ್ನು ಮಾಡಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರ ಜನಾಝು ನಮಾಝ್ ನಿರ್ವಹಿಸಿದರು ಹಾಗೂ ಸ್ವತಃ ಗೋರಿಗೆ ಇಳಿದು ದಫನ್ ಮಾಡಿದರು. ಹಝ್ರತ್ ಅಬುಲ್‌ಆಸ್(ರ) ಕೂಡ ಅದರ ನಂತರ ಹೆಚ್ಚು ಕಾಲ ಬದುಕಿರಲಿಲ್ಲ. ಹಿಜರೀ 12ರಲ್ಲಿ ಅವರು ನಿಧನರಾದರು.

ಸವೀಕ್ ಯುದ್ಧ ಹಿಜರೀ 2ರಲ್ಲಿ ನಡೆದಿತ್ತು. ಈ ಯುದ್ಧಕ್ಕೆ ಕಾರಣವೇನೆಂದರೆ, ಮುಶ್ರಿಕರು ಪರಾಜಿತರೂ ದುಃಖಿತರೂ ಆಗಿ ಮಕ್ಕಕ್ಕೆ ಮರಳಿ ಹೋದಾಗ ಅಬೂಸುಫ್‌ಯಾನ್ ತನ್ನ ಶರೀರದಲ್ಲಿ ತೈಲ ಸವರುವುದನ್ನು ನಿಲ್ಲಿಸಿದರು ಮತ್ತು ಹಝ಼್ರತ್ ಪೈಗಂಬರ್(ಸ) ಹಾಗೂ ಅವರ ಸಹಾಬಿಯರೊಡನೆ ಬದ್ರ್ ಯುದ್ಧದ ಸೇಡು ತೀರಿಸದೇ ಸ್ನಾನ ಮಾಡುವುದಿಲ್ಲವೆಂದು ಶಪಥ ಮಾಡಿದರು.

ಒಂದು ವರದಿಯ ಪ್ರಕಾರ ಅಬೂಸುಫ್‌ಯಾನ್ ಇನ್ನೂರು ಸವಾರಿಯರೊಂದಿಗೆ, ಮತ್ತೊಂದು ವರದಿಯ ಪ್ರಕಾರ ನಲ್ವತ್ತು ಸವಾರಿಯರ ಜೊತೆಗೆ ತನ್ನ ಶಪಥವನ್ನು ಈಡೇರಿಸಲು ಹೊರಟರು. ಮದೀನದ ಸಮೀಪಕ್ಕೆ ತಲುಪಿದ ನಂತರ ಸಹಾಯವನ್ನು ಪಡೆಯಲಿಕ್ಕಾಗಿ ಬನೂ ನಝೀರಿನ ಹಯ್ಯ ಬಿನ್ ಅಖ್ತಬ್‌ರ ಬಳಿಗೆ ಹೋದರು. ಅವರು ಸಹಾಯ ನೀಡುವುದನ್ನು ನಿರಾಕರಿಸಿದರು. ಅನಂತರ ಅವರು ಸಲಾಂ ಬಿನ್ ಮಶ್ಕಮಿನ ಬಳಿಗೆ ಹೋದರು. ಆತನು ಮುಸ್ಲಿಮರ ರಹಸ್ಯ ಮಾಹಿತಿಗಳನ್ನು ತಿಳಿಸಿದನು ಮತ್ತು ಹಝ಼್ರತ್ ಪೈಗಂಬರ್(ಸ)ರ ದಿನಚರಿಯನ್ನು ಹೇಳಿಕೊಟ್ಟನು. ಮದೀನದಿಂದ ಮೂರು ಮೈಲುಗಳ ದೂರದಲ್ಲಿ ಒಂದು ಖರ್ಜೂರದ ತೋಟವಿರುವ ಅರೀಝ್ ಕಣಿವೆಯ ಕಡೆಗೆ ಅಬೂಸುಫ್‌ಯಾನ್ ಖುರೈಶಿನ ಕೆಲವು ಜನರನ್ನು ಕಳುಹಿಸಿದರು. ಅಲ್ಲಿ ಅವರು ಅನೇಕ ಖರ್ಜೂರದ ಮರಗಳನ್ನು ಸುಟ್ಟು ಹಾಕಿದರು ಮತ್ತು ಓರ್ವ ಮುಸ್ಲಿಂ ಅನ್ಸಾರಿಯನ್ನು ವಧಿಸಿದರು. ಅಬೂಸುಫ್‌ಯಾನ್ ಈ ವಿಜಯವನ್ನು ತನ್ನ ಶಪಥದ ಈಡೇರಿಕೆಯಾಗಿ ಭಾವಿಸಿ ತನ್ನ ಸೈನ್ಯದೊಂದಿಗೆ ಮಕ್ಕದ ಕಡೆಗೆ ಹೊರಟರು. ಹಝ಼್ರತ್ ಪೈಗಂಬರ್(ಸ)ರಿಗೆ ಅದರ ಬಗ್ಗೆ ಗೊತ್ತಾದಾಗ ಅವರು ಇನ್ನೂರು ಸಹಾಬಿಯರ ಜೊತೆಗೆ ಅಬೂಸುಫ್‌ಯಾನನ್ನು ಹಿಂಬಾಲಿಸಲು ಹೊರಟರು ಮತ್ತು ಖರ್‌ಖರತುಲ್‌ಕುದರ್‌ಗೆ ತಲುಪಿದರು. ಅಬೂಸುಫ್‌ಯಾನ್ ಮತ್ತು ಅವರ ಸೈನ್ಯ ಓಡಿಹೋಗುತ್ತಾ ಧಾನ್ಯದ ಚೀಲಗಳನ್ನು ಎಸೆಯುತ್ತಿದ್ದರು. ಮುಸ್ಲಿಮರು ಅವುಗಳನ್ನು ಹೆಕ್ಕುತ್ತಾ ಹೋಗುತ್ತಿದ್ದರು. ಆದ್ದರಿಂದ ಈ ಯುದ್ಧದ ಹೆಸರು ಸವೀಖ್ ಯುದ್ಧ ಎಂದಾಯಿತು. ಎಂದರೆ ಧಾನ್ಯದ ಯುದ್ಧ. ಅಬೂಸುಫ್‌ಯಾನ್ ಮತ್ತು ಅವರ ಸೈನ್ಯ ಪರಾರಿಯಾಯಿತು. ಹಝ಼್ರತ್ ಪೈಗಂಬರ್(ಸ) ಮದೀನಕ್ಕೆ ಮರಳಿ ಹೋದರು. ಸಹಾಬಿಯರು ಇದರ ಬಗ್ಗೆ ಕೇಳಿದಾಗ, ಇದು ಯುದ್ಧವೇ ಆಗಿದೆ ಎಂದು ಹಝ಼್ರತ್ ಪೈಗಂಬರ್(ಸ) ಹೇಳಿದರು.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ಼್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಪ್ರಥಮ ಈದುಲ್ ಅಝ್‌ಹಾದ ಬಗ್ಗೆ ಹೀಗೆ ಬರೆದಿರುವರು: ಅದೇ ವರ್ಷ ಧುಲ್‌ಹಜ್ಜಾ ತಿಂಗಳಲ್ಲಿ ಎರಡನೇ ಇಸ್ಲಾಮೀ ಹಬ್ಬವಾದ **ಈದುಲ್ ಅಝ್‌ಹಾ** ಜಾರಿಗೆ ಬಂತು. ಅದನ್ನು ಧುಲ್‌ಹಜ್ಜ ತಿಂಗಳ ಹತ್ತನೇ ದಿನಾಂಕದಂದು ಪೂರ್ತಿ ಇಸ್ಲಾಮಿಕ ಲೋಕದಲ್ಲಿ ಆಚರಿಸಲಾಗುತ್ತಿದೆ. ಈ ಈದಿನಲ್ಲಿ ಆಡು, ಕುರಿ ಒಂಟೆ ಮುಂತಾದ ಯಾವುದಾದರೂ ಜಾನುವಾರನ್ನು ಬಲಿಕೊಟ್ಟು ಅದರ ಮಾಂಸವನ್ನು ತನ್ನ ಸಂಬಂಧಿಕರು, ಗೆಳೆಯರು, ನೆರೆಕರೆಯವರು ಮತ್ತು ಇತರರಿಗೆ ವಿತರಣೆ ಮಾಡುವುದು ಮತ್ತು ಸ್ವತಃ ಕೂಡ ತಿನ್ನುವುದು ಆರ್ಥಿಕ ಶಕ್ತಿಯುಳ್ಳ ಎಲ್ಲ ಮುಸ್ಲಿಮರಿಗೆ ಕಡ್ಡಾಯವಾಗಿದೆ. ಈದುಲ್ ಅಝ್‌ಹಾದ ದಿನದಂದು ಮತ್ತು ನಂತರದ ಎರಡು ದಿನಗಳಲ್ಲಿ ಇಸ್ಲಾಮಿಕ ಲೋಕದಲ್ಲಿ ಕೋಟಿಗಟ್ಟಲೆ ಜಾನುವಾರುಗಳನ್ನು ಅಲ್ಲಾಹನ ಮಾರ್ಗದಲ್ಲಿ ಬಲಿಯರ್ಪಿಸಲಾಗುತ್ತದೆ. ಹೀಗೆ ಹಝ಼್ರತ್ ಇಬ್ರಾಹೀಮ್(ಅ), ಹಝ಼್ರತ್ ಇಸ್ಮಾಈಲ್(ಅ) ಮತ್ತು ಹಝ಼್ರತ್ ಹಾಜಿರ(ರ)ರ ಮಹತ್ತಾದ ತ್ಯಾಗವನ್ನು ನೆನಪಿಸಲಾಗುತ್ತದೆ. ಅದರ ಅತ್ಯುತ್ತಮ ಮಾದರಿ ಹಝ಼್ರತ್ ಪೈಗಂಬರ್(ಸ)ರ ಜೀವನವಾಗಿದೆ. ತನ್ನ ಯಜಮಾನನಾದ ಪ್ರಭುವಿನ ಮಾರ್ಗದಲ್ಲಿ ತನ್ನ ಜೀವ, ಸಂಪತ್ತು ಮತ್ತು ತನ್ನ ಪ್ರತಿಯೊಂದು ವಸ್ತುವನ್ನು ತ್ಯಾಗ ಮಾಡಲಿಕ್ಕಾಗಿ ತಯಾರಾಗಬೇಕು ಎಂದು ಪ್ರತಿಯೊಂದು ಮುಸ್ಲಿಮರನ್ನು ಈ ಮೂಲಕ ಎಚ್ಚರಗೊಳಿಸಲಾಗಿದೆ. ಈ ಈದ್ ಹಬ್ಬವನ್ನು ಕೂಡ ಈದುಲ್ ಫಿತ್‌ರಿನ ಹಾಗೆ ಒಂದು ಮಹತ್ತಾದ ಇಸ್ಲಾಮಿನ ಆರಾಧನೆಯಾದ ಹಜ್ಜ್ ಅನುಷ್ಠಾನದ ಕೊನೆಯಲ್ಲಿ ಆಚರಿಸಲಾಗುತ್ತದೆ.

ಹಝ಼್ರತ್ ಫಾತಿಮ(ರ)ರ ನಿಕಾಹ್ ಸಹ ಹಿಜರೀ 2ರಲ್ಲಿ ನಡೆದಿತ್ತು. ಹಝ಼್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ಼್ರತ್ ಅಬೂಬಕರ್(ರ) ಮತ್ತು ಹಝ಼್ರತ್ ಉಮರ್(ರ) ಹಝ಼್ರತ್ ಫಾತಿಮ(ರ)ರನ್ನು ವಿವಾಹ ಮಾಡಲು ವಿನಂತಿಸಿಕೊಂಡಿದ್ದರು. ಆದರೆ ಹಝ಼್ರತ್ ಪೈಗಂಬರ್(ಸ) ಸುಮ್ಮನಿದ್ದರು ಮತ್ತು ಯಾವುದೇ ಉತ್ತರ ನೀಡಲಿಲ್ಲ. ಹಝ಼್ರತ್ ಅಲಿ(ರ) ಹೇಳುತ್ತಾರೆ: ನಾನು ಹಝ಼್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದೆನು ಮತ್ತು ಹೀಗೆ ಕೇಳಿದೆ: ಹಝ಼್ರತ್ ಫಾತಿಮ(ರ)ರ ಮದುವೆಯನ್ನು ನನ್ನೊಂದಿಗೆ ಮಾಡಿ ಕೊಡುವಿರಾ? ಹಝ಼್ರತ್ ಪೈಗಂಬರ್(ಸ) ಕೇಳಿದರು: ನಿಮ್ಮ ಬಳಿ ಮಹರ್ ಆಗಿ ಕೊಡಲು ಏನಾದರೂ ಇದೆಯಾ? ನಾನು ಹೇಳಿದೆ: ನನ್ನ ಬಳಿ ಕುದುರೆ ಮತ್ತು ಯುದ್ಧಕವಚವಿದೆ. ಹಝ಼್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಕುದುರೆಯ ಅಗತ್ಯವಿದೆ. ಯುದ್ಧಕವಚವನ್ನು ಮಾರಾಟ ಮಾಡು. ಹೀಗೆ ನಾನು 480 ದಿರ್ಹಮಿಗೆ ನನ್ನ ಯುದ್ಧವಸ್ತ್ರವನ್ನು ಮಾರಾಟ ಮಾಡಿಕೊಂಡು ಮಹರಿನ ಹಣದ ಏರ್ಪಾಡು ಮಾಡಿದೆ. ಹಝ಼್ರತ್ ಪೈಗಂಬರ್(ಸ) ಆ ಹಣದಿಂದ ಒಂದು ಹಿಡಿಯಷ್ಟು ಹಝ಼್ರತ್ ಬಿಲಾಲ್(ರ)ರಿಗೆ ಕೊಡುತ್ತಾ ಸುಗಂಧದ್ರವ್ಯವನ್ನು ಖರೀದಿ ಮಾಡಲು ಹೇಳಿದರು. ಹಝ಼್ರತ್ ಫಾತಿಮಾ(ರ)ರಿಗೆ ಕೊಡಬೇಕಾದ ಉಡುಗೊರೆಗಳನ್ನು ತಯಾರು ಮಾಡಲು ಹಝ಼್ರತ್ ಪೈಗಂಬರ್(ಸ) ಕೆಲವು ಜನರೊಡನೆ ಹೇಳಿದರು. ಹೀಗೆ ಹಝ಼್ರತ್ ಫಾತಿಮ(ರ)ರಿಗಾಗಿ ಒಂದು ಮಂಚ ಮತ್ತು

ಖರ್ಜೂರದ ತೊಗಲಿನಿಂದ ತುಂಬಿಸಲಾದ ಚರ್ಮದ ಒಂದು ತಲೆದಿಂಬನ್ನು ತಯಾರಿಸಲಾಯಿತು.

ಒಂದು ವರದಿಯಲ್ಲಿ ಹೀಗಿದೆ: ಈ ವಿವಾಹ ಸಂಬಂಧವನ್ನು ಮಾಡುತ್ತಾ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರೊಡನೆ ಹೀಗೆ ಹೇಳಿದರು: ಹೀಗೆ ಮಾಡಲು ನನ್ನ ಪ್ರಭು ನನಗೆ ಆಜ್ಞಾಪಿಸಿದ್ದಾನೆ. (ಎಂದರೆ, ಹಝ್ರತ್ ಫಾತಿಮ(ರ)ರ ವಿವಾಹವನ್ನು ಹಝ್ರತ್ ಅಲಿ(ರ)ರೊಂದಿಗೆ ನಡೆಸಲು.) ಹಝ್ರತ್ ಫಾತಿಮ(ರ)ರ ವಿವಾಹದ ನಂತರ ಹಝ್ರತ್ ಪೈಗಂಬರ್(ಸ) ಒಂದು ಪಾತ್ರೆಯಲ್ಲಿ ವುಝೂ ಮಾಡಿದರು ಮತ್ತು ಆ ನೀರನ್ನು ಹಝ್ರತ್ ಫಾತಿಮ(ರ) ಮತ್ತು ಹಝ್ರತ್ ಅಲಿ(ರ)ರ ಮೇಲೆ ಸಿಂಪಡಿಸುತ್ತಾ ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಬಾರಿಕ್ ಫೀಹಿಮಾ ವ ಬಾರಿಕ್ ಅಲೈಹಿಮಾ ವಬಾರಿಕ್ ಲಹುಮಾ ನಸ್‌ಲಹುಮಾ.** ಅರ್ಥ: ಹೇ ನನ್ನ ಅಲ್ಲಾಹ್, ನೀನು ಅವರಿಬ್ಬರ ಸಂಬಂಧದಲ್ಲಿ ಅನುಗ್ರಹವನ್ನು ಉಂಟುಮಾಡು, ಅವರ ಇತರರೊಂದಿಗೆ ಇರಿಸುವ ಸಂಬಂಧದಲ್ಲಿ ಅನುಗ್ರಹವನ್ನು ಇರಿಸು. ಅವರ ಸಂತಾನಗಳಲ್ಲಿ ಅನುಗ್ರಹವನ್ನು ಇರಿಸು.

ಈ ಪ್ರಾರ್ಥನೆಯನ್ನು ವಿವಾಹಿತರಾಗುವ ಜೋಡಿಗಳಿಗಾಗಿ ಅವರ ಹೆತ್ತವರು ಮಾಡಬೇಕು. ಇಂದು ಲೌಕಿಕ ಆಸೆ–ಅಭಿಲಾಷೆಗಳ ಕಾರಣದಿಂದ ವಿವಾಹದ ನಂತರ ಹುಡುಗ–ಹುಡುಗಿಯರ ನಡುವೆ ಸಮಸ್ಯೆಗಳು ತಲೆದೋರುತ್ತವೆ. ಈಗ ಅದು ವರ್ಧಿಸುತ್ತಲೂ ಇವೆ. ದೀನಿಗೆ ಆದ್ಯತೆ ನೀಡುವುದಾದರೆ ಮತ್ತು ಈ ರೀತಿಯಲ್ಲಿ ದುಆ ಮಾಡಿದರೆ ಹಾಗೂ ತಂದೆತಾಯಂದಿರು ಸಹ ತಮ್ಮ ಪಾತ್ರವನ್ನು ನಿರ್ವಹಿಸುವುದಾದರೆ ಸಂಬಂಧ ನೆಲೆನಿಲ್ಲುವುದು.

ಹಝ್ರತ್ ಫಾತಿಮ(ರ)ರ ವಿವಾಹದ ನಂತರ ಒಬ್ಬ ನಿಷ್ಠಾವಂತ ಸಹಾಬಿಯಾದ ಹಾರಿಸ ಬಿನ್ ನೂಮಾನ್ ಅನ್ಸಾರಿ(ರ) ತನ್ನೊಂದು ಮನೆಯನ್ನು ಖಾಲಿ ಮಾಡಿ ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ)ರಿಗೆ ಅದರಲ್ಲಿ ತಂಗಲು ನೀಡಿದರು. ಒಮ್ಮೆ ಬೀಸುಕಲ್ಲು ಚಲಾಯಿಸುವುದರಿಂದ ಕೈ ನೋವು ಆಗುತ್ತಿದೆ ಎಂದು ಹೇಳುತ್ತಾ ಒಬ್ಬ ಸೇವಕನ ಏರ್ಪಾಡನ್ನು ಮಾಡಲು ಹಝ್ರತ್ ಫಾತಿಮ(ರ) ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಿದಾಗ, ಅವರು ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ)ರೊಡನೆ ಹೀಗೆ ಹೇಳಿದರು: ನೀವು ಹಾಸಿಗೆಯಲ್ಲಿ ಮಲಗುವಾಗ 34 ಬಾರಿ **ಅಲ್ಲಾಹು ಅಕ್ಬರ್,** 33 ಬಾರಿ **ಸುಬ್‌ಹಾನಲ್ಲಾಹ್** ಮತ್ತು 33 ಬಾರಿ **ಅಲ್‌ಹಮ್ದುಲಿಲ್ಲಾಹ್** ಹೇಳಿರಿ. ಇದು ನಿಮಗಿಬ್ಬರಿಗೂ ಸೇವಕನಿಗಿಂತ ಉತ್ತಮವಾಗಿದೆ. ಸೇವಕನನ್ನು ಒದಗಿಸಿ ಕೊಡುವುದು ಹಝ್ರತ್ ಪೈಗಂಬರ್(ಸ)ರಿಗೆ ಕಷ್ಟದ ಸಂಗತಿಯಾಗಿರಲಿಲ್ಲ. ಆದರೆ ಜನರು ಒಂದು ಸಂಗತಿಯನ್ನು ಮತ್ತೊಂದು ಸಂಗತಿಯಾಗಿ ಅರ್ಥ ಮಾಡಿಕೊಳ್ಳಬಹುದಾದ ಸಾಧ್ಯತೆಯಿತ್ತು. ಅಲ್ಲದೆ ಪ್ರಜೆಗಳ ಸಂಪತ್ತನ್ನು ಸ್ವಂತಕ್ಕಾಗಿ ಉಪಯೋಗಿಸುವುದು ಸರಿಯೆಂದು ರಾಜರುಗಳು ಭಾವಿಸುವ ಸಾಧ್ಯತೆಯಿತ್ತು. ಆದ್ದರಿಂದ ಮುಂಜಾಗ್ರತೆ ಎಂಬ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಬಳಿ ವಿತರಣೆಗಾಗಿ ಬರುತ್ತಿದ್ದ ಗುಲಾಮರು ಮತ್ತು ದಾಸಿಯರಿಂದ ಯಾರನ್ನೂ ಅವರಿಗೆ ಕೊಡಲಿಲ್ಲ.

(ಹುಝೂರ್ ಹೇಳಿದರು:) ಉಳಿದ ಭಾಗ ಮುಂದಿನ ಬಾರಿ ವಿವರಿಸಲಾಗುವುದು – ಇನ್‌ಶಾ ಅಲ್ಲಾಹ್. ಈಗ ನಾನು ಲೋಕದ ಸ್ಥಿತಿಗತಿಗಳಿಗೆ ಸಂಬಂಧಿಸಿ ಪುನಃ ದುಆಗಾಗಿ ಮನವಿ ಮಾಡಲು ಬಯಸುತ್ತೇನೆ. ಪ್ರತೀಕಾರಕ್ಕೂ ಒಂದು ಮಿತಿ ಇರಬೇಕು ಎಂದೂ ಅಮೇರಿಕ ಮತ್ತು ಪಾಶ್ಚಿಮಾತ್ಯ ದೇಶಗಳು ಹಮಾಸ್ ಮತ್ತು ಇಸ್ರೇಲಿನ ಯುದ್ಧದಲ್ಲಿ ತಮ್ಮ ಪಾತ್ರವನ್ನು ವಹಿಸಬೇಕೆಂದೂ ಯುದ್ಧವನ್ನು ತಡೆಯಲು ಮತ್ತು ಸಂಧಾನವನ್ನು ಮಾಡಲು ಪ್ರಯತ್ನಿಸಬೇಕೆಂದೂ ಈಗ ಪಾಶ್ಚಿಮಾತ್ಯ ದೇಶದ ಮತ್ತು ಅಮೇರಿಕದ ಕೆಲವು ಲೇಖಕರು ವಾರ್ತಾಪತ್ರಿಕೆಗಳಲ್ಲಿ ಬರೆದಿರುವರು. ಆದರೆ ಪಾಶ್ಚಿಮಾತ್ಯ ದೇಶಗಳು ಯುದ್ಧವನ್ನು ತಡೆಯುವುದಕ್ಕೆ ಬದಲಾಗಿ ಯುದ್ಧವನ್ನು ಹೊತ್ತಿಸಲು ಸಿದ್ಧರಾಗಿ ನಿಂತಿರುವರು ಎಂದು ತೋರುತ್ತಿದೆ ಎಂದೂ ಈ ಲೇಖಕರು ಬರೆದಿರುವರು.

ಈಗ ಮಿತಿಯನ್ನು ಮೀರಿದೆ ಎಂದು ಹೇಳಿ ಅಮೆರಿಕದ ವಿದೇಶಾಂಗ ಮಂತ್ರಾಲಯದ ಒಬ್ಬ ದೊಡ್ಡ ಅಧಿಕಾರಿ ರಾಜಿನಾಮೆ ನೀಡಿರುವುದಾಗಿ ನಿನ್ನೆ ವಾರ್ತೆ ಬಂದಿತ್ತು. ಪ್ಯಾಲೆಸ್ತೀನಿನ ಅಮಾಯಕರ ಮೇಲೆ ಬಹಳ ಹೆಚ್ಚು ದೌರ್ಜನ್ಯ ನಡೆಯುತ್ತಿದೆ. ಇದರ ಬಗ್ಗೆ ಈ ಪಾಶ್ಚಿಮಾತ್ಯ ದೇಶಗಳು ಕಾಳಜಿವಹಿಸಬೇಕಾಗಿದೆ. ಅವರಲ್ಲೂ ಸಭ್ಯರು ಇದ್ದಾರೆ ಎಂದು ಈ ಲೇಖನಗಳಿಂದ ತಿಳಿದುಬರುತ್ತದೆ. ಅದೇ ರೀತಿಯಲ್ಲಿ ಕೆಲವು ಯಹೂದಿ ಪ್ರಜೆಗಳು ಕೂಡ ಪ್ಯಾಲೆಸ್ತೀನಿನ ಪರವಾಗಿ ಮತ್ತು ದೌರ್ಜನ್ಯವನ್ನು ವಿರೋಧಿಸಿಕೊಂಡು ಮಾತನಾಡುತ್ತಿರುವ ದೃಶ್ಯಗಳು ಕೆಲವೊಮ್ಮೆ ಮೀಡಿಯದಲ್ಲಿ ಪ್ರಸಾರವಾಗುತ್ತಿವೆ. ರಶ್ಯದ ವಿದೇಶಾಂಗ ಮಂತ್ರಿ ಕೂಡ ಹೀಗೆ ಹೇಳಿದರು: "ಈ ದೇಶಗಳು ಇದೇ ರೀತಿಯಲ್ಲಿ ತಮ್ಮ ವರ್ತನೆಯನ್ನು ಮುಂದುವರೆಸಿದರೆ ಈ ಯುದ್ಧ ಪೂರ್ತಿ ಭೂಖಂಡದಲ್ಲಿ, ಮಾತ್ರವಲ್ಲ ಪೂರ್ತಿ ಲೋಕದಲ್ಲಿ ಹರಡುವುದು ಎಂದು ನಾನು ಭಾವಿಸುತ್ತೇನೆ."

ಆದ್ದರಿಂದ ಈ ಜನರು ಎಚ್ಚರಗೊಳ್ಳಬೇಕು. ಅದೇ ರೀತಿಯಲ್ಲಿ ನಾನು ಹಿಂದೆಯೂ ಹೇಳಿದಂತೆ ಮುಸ್ಲಿಂ ರಾಷ್ಟ್ರಗಳು ಒಟ್ಟಾಗಿ ಒಂದು ಸ್ವರದಿಂದ ಧ್ವನಿ ಎತ್ತಬೇಕು. ಲೋಕದಲ್ಲಿರುವ 53 – 54 ಮುಸ್ಲಿಂ ರಾಷ್ಟ್ರಗಳು ಒಂದೇ ಸ್ವರದಲ್ಲಿ ಹೇಳಿದರೆ ಅದು ದೊಡ್ಡ ಶಕ್ತಿಯಾಗುವುದು ಮತ್ತು ಅದು ಪ್ರಭಾವಶಾಲಿಯಾಗಿರುವುದು. ಇಲ್ಲದಿದ್ದರೆ ಅಲ್ಲಿಂದ ಇಲ್ಲಿಂದ ಬರುವ ಒಂದೊಂದು ಹೇಳಿಕೆಗಳಿಗೆ ಯಾವುದೇ ಪ್ರಭಾವವಿರುವುದಿಲ್ಲ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಹಾಗೂ ಯುದ್ಧ ನಿಲ್ಲಿಸಲು ಇರುವ ಒಂದೇ ಒಂದು ಮಾರ್ಗ ಇದೇ ಆಗಿದೆ.

ಆದ್ದರಿಂದ ಲೋಕವನ್ನು ನಾಶದಿಂದ ರಕ್ಷಿಸಲಿಕ್ಕಾಗಿ ಮುಸ್ಲಿಂ ದೇಶಗಳು ತಮ್ಮ ಪಾತ್ರವನ್ನು ವಹಿಸಲು ಸಂಪೂರ್ಣವಾದ ಪ್ರಯತ್ನವನ್ನು ಮಾಡಬೇಕಾಗಿದೆ. ಹಾಗೆ ಮಾಡಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ. ಆದರೆ ಹೇಗಿದ್ದರೂ ನಾವು ದುಆಗಳನ್ನು ಮಾಡುವುದಕ್ಕೆ ಒತ್ತು ನೀಡಬೇಕು. ಅಲ್ಲಾಹನು ಈ ಯುದ್ಧವನ್ನು ಕೂಡ ಕೊನೆಗೊಳಿಸಲಿ ಹಾಗೂ ಮುಗ್ಧ ಮತ್ತು ಪೀಡಿತ ಪೆಲಸ್ತೀನಿಯರ ಸಂರಕ್ಷಣೆ ಮಾಡಲಿ. ಇನ್ನಷ್ಟು ದೌರ್ಜನ್ಯ ಅವರ ಮೇಲೆ ಆಗದಿರಲಿ. ದೌರ್ಜನ್ಯ ಎಲ್ಲೇ ಆಗುತ್ತಿದ್ದರೂ ಅದನ್ನು ಕೊನೆಗೊಳಿಸಲಿ. ಅಲ್ಲಾಹನು ನಮಗೆ ದುಆ ಮಾಡಲು ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak',** Islamabad, Tilford, UK.* On 20-10-2023

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon